# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್**

ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

**ಭಾಗ ೨೮**

## ವೀರಯೋಧನ ಪುನರಾಗಮನ

**ಸ್ವಾ**ಮಿ ವಿವೇಕಾನಂದರು ಎರಡನೆಯ ಬಾರಿಗೆ ಡೆಟ್ರಾಯ್ಟ್ ನಗರಕ್ಕೆ ಹಿಂತಿರುಗುತ್ತಿದ್ದಾರೆ, ತಮ್ಮ ಅನುಪಸ್ಥಿತಿಯಲ್ಲಿ ತಮ್ಮ ವಿರೋಧಿಗಳು ಮಾಡಿದ ತೀವ್ರ ನಿಂದನೆ ಮತ್ತು ಟೀಕೆಗಳಿಗೆ ಅವರು ತಕ್ಕ ಉತ್ತರವನ್ನು ನೀಡಲಿದ್ದಾರೆ. ಅವರ ಸ್ನೇಹಿತರು ಸ್ವಾಮೀಜಿಯವರ ಬರವನ್ನು ಎದುರು ನೋಡುತ್ತಿದ್ದಾರೆ. ಈ ಬಗ್ಗೆ ಡೆಟ್ರಾಯ್ಟ್ ನಗರದ ಹಲವು ಪತ್ರಿಕೆಗಳು ಪ್ರಕಟಣೆಗಳನ್ನು ಪ್ರಕಟಿಸಿವೆ. ಸ್ವಾಮೀಜಿ ೧೮೯೪ರ ಮಾರ್ಚ್ ೧೧ನೇ ತಾರೀಕಿನಂದು ಡೆಟ್ರಾಯ್ಟ್ ನಗರದ ಒಪೆರಾ ಹೌಸಿನಲ್ಲಿ 'ಭಾರತದಲ್ಲಿ ಕ್ರೈಸ್ತ ಮಿಷನರಿಗಳು' ಎಂಬ ವಿಷಯವಾಗಿ ಮಾತನಾಡಲಿದ್ದಾರೆ.

ಸುಳ್ಳು ಮತ್ತು ಬೂಟಾಟಿಕೆ ಈ ವೀರಯೋಧನನ್ನು ಯಾವಾಗಲೂ ಕೆಚ್ಚೆಬ್ಬಿಸುತ್ತಿದ್ದವು. ಮುಂದಿನ ವರ್ಷ ಬರೆದ ಒಂದು ಪತ್ರದಲ್ಲಿ ಸ್ವಾಮೀಜಿ ಹೀಗೆ ಹೇಳುತ್ತಾರೆ: ''ನನ್ನನ್ನು ಜನರು ಹೆಚ್ಚು ವಿರೋಧಿಸಿದಷ್ಟೂ ನನ್ನಲ್ಲಿ ಹೊಸ ಶಕ್ತಿಧಾರೆಯ ಉಗಮವಾಗುತ್ತಿತ್ತು.'' ಈ ಬಾರಿ ಅವರು ತಮ್ಮ ಮೇಲೆ ಎರಚಲಾದ ಎಲ್ಲ ನಿಂದೆಗಳ, ಅಪಮಾನಗಳ ಮತ್ತು ಸುಳ್ಳು ವದಂತಿಗಳ ಕೆಸರಿಗೆ ಅಂತ್ಯವನ್ನು ಕಾಣಿಸಲು ಬರುತ್ತಿದ್ದರು. ಅವರು ಮಾಡಿದ ಭಾಷಣದಲ್ಲಿ ಕ್ರೋಧವಿರಲಿಲ್ಲ, ಅದಕ್ಕೆ ಬದಲಾಗಿ ಧೀರತೆ ಎದ್ದು ಕಾಣುತ್ತಿತ್ತು.

ಈ ಭಾಷಣವು ಅದ್ಭುತವಾಗಿತ್ತು. ತಾವು ಹಿಂದೆ ಡೆಟ್ರಾಯ್ಟ್ ನಗರದಲ್ಲಿ ನೀಡಿದ ಎಲ್ಲ ಭಾಷಣಗಳಿಗಿಂತಲೂ ಇದು ಶ್ರೇಷ್ಠವಾಗಿತ್ತೆಂದು ಮುಂದೆ ಅವರೇ ಒಂದು ಪತ್ರದಲ್ಲಿ ಒಪ್ಪಿಕೊಳ್ಳುತ್ತಾರೆ. ಗೌರವಾನ್ವಿತ ಟಿ.ಹೆಚ್ ಪಾಮರ್ ಅವರು ಸ್ವಾಮಿ ವಿವೇಕಾನಂದರನ್ನು ಸಭಿಕರಿಗೆ ಪರಿಚಯವನ್ನು ಮಾಡಿಕೊಟ್ಟರು. ಹಲವಾರು ಪತ್ರಿಕೆಗಳು ಸ್ವಾಮೀಜಿಯವರ ಭಾಷಣವನ್ನು ಬಹಳ ವಿವರವಾಗಿ ಪ್ರಕಟಮಾಡಿದವು. ಈ ಭಾಷಣದಲ್ಲಿ ಸ್ವಾಮೀಜಿಯವರ ಮಾತುಗಳ ಸಾರಾಂಶ ಹೀಗಿತ್ತು:

''ಭಾರತವನ್ನು ಕ್ರೈಸ್ತದೇಶವನ್ನು ಮಾಡುವ ಪ್ರಯತ್ನವನ್ನು ಕ್ರೈಸ್ತ ಮಿಷನರಿಗಳು ಮಾಡುತ್ತಿದ್ದಾರೆ. ಆದರೆ ಈ ಯತ್ನದಲ್ಲಿ ಅವರು ಭಾರತೀಯರನ್ನು ನಿಂದೆಗೆ ಒಳಪಡಿಸುತ್ತಿದ್ದಾರೆ. ಇಂಗ್ಲಿಷ್ ರಾಜಶಾಹಿಯ ಜೊತೆಗೆ ಸೇರಿಕೊಂಡು, ಸ್ಥಳೀಯರನ್ನು ದೂರ ವಿರಿಸಿದ್ದಾರೆ. ಸ್ಥಳೀಯರ ಭಾಷೆಯನ್ನು ಕೂಡ ಅವರು ಕಲಿತಿಲ್ಲ. ಪ್ರಚಂಡ ಬರಗಾಲದಂತಹ ಸಂದರ್ಭದಲ್ಲಿ ಅಲ್ಪಸ್ವಲ್ಪ ಹಣವನ್ನು ನೀಡಿ, ಮುಗ್ಧರೂ ದರಿದ್ರರೂ ಆದ ಸ್ಥಳೀಯರನ್ನು ಮತಾಂತರಗೊಳಿಸುತ್ತಿದ್ದಾರೆ. ಮಿಷನರಿಗಳು ಕೆಲವರ ಮನೆಗಳಿಗೆ ಹೋಗುತ್ತಾರೆ. ಅಲ್ಲಿ ಬೈಬಲ್ ಪಠಣವನ್ನು ಮಾಡುತ್ತಾರೆ. ಅದಕ್ಕೆ ಯಾರೂ ಗಮನ ಕೊಡುವುದಿಲ್ಲ.

''ಹೀಗೆ ನೀವು ಭಾರತಕ್ಕೆ ಕಳುಹಿಸುವ ಮಿಷನರಿಗಳು ಸಾಮರ್ಥ್ಯ ಇಲ್ಲದವರು. ಅವರು ಸಂಸ್ಕೃತವನ್ನು ಅಧ್ಯಯನ ಮಾಡಿ, ಭಾರತೀಯ ಸಂಸ್ಕೃತಿ, ಸಭ್ಯತೆಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುವುದಿಲ್ಲ. ಅಮೆರಿಕ ಮತ್ತು ಯುರೋಪ್ ದೇಶಗಳಲ್ಲಿ ಹಬ್ಬುತ್ತಿರುವ ನಾಸ್ತಿಕತೆ ಮತ್ತು ಸಂದೇಹವಾದಗಳು ಈ ಕ್ರೈಸ್ತ ಮಿಷನರಿಗಳನ್ನು ಪೌರಸ್ತ್ಯ ದೇಶಗಳ ಕಡೆಗೆ ತಳ್ಳುತ್ತಿರಬಹುದು.

''ನಿಮ್ಮ ಕ್ರೈಸ್ತ ಮಿಷನರಿಗಳು ಏಸುಕ್ರಿಸ್ತನಿಗೆ ಸಮರ್ಪಿತವಾದ ಜೀವನವನ್ನು ನಡೆಸದಿದ್ದರೆ, ಕ್ರೈಸ್ತರೆಂದು ಹೇಳಿಕೊಳ್ಳುವುದಕ್ಕೆ ಅವರಿಗೆ ಯೋಗ್ಯತೆಯಾದರೂ ಹೇಗೆ ಬರಬೇಕು? ನಮಗೆ ಬೇಕಾಗಿರುವುದು ಕ್ರಿಸ್ತನ ಮಿಷನರಿಗಳೇ ಹೊರತು, ಚರ್ಚಿನ ಮಿಷನರಿಗಳಲ್ಲ. ಅಂಥ ಕ್ರಿಸ್ತನ ಮಿಷನರಿಗಳು ಸಾವಿರ ಸಂಖ್ಯೆಯಲ್ಲಿ ಭಾರತಕ್ಕೆ ಬರಲಿ. ನಮ್ಮ ಆಕ್ಷೇಪಣೆಯೇನೂ ಅದಕ್ಕೆ ಇಲ್ಲ. ಆದರೆ ಕ್ರೈಸ್ತ ಧರ್ಮದ ಪ್ರಸಾರವನ್ನು ಮಿಷನರಿಗಳು ದಂಧೆಯಂತೆ ನಡೆಸದಿರಲಿ.

''ಭಾರತವನ್ನು ಕ್ರೈಸ್ತದೇಶವನ್ನಾಗಿ ಪರಿವರ್ತಿಸುವ ಯಾವುದೇ ಸೂಚನೆಗಳೂ ನನಗೆ ಕಾಣಬರುತ್ತಿಲ್ಲ. ಅದು ಸಾಧ್ಯವಿದ್ದರೂ, ಅದನ್ನು ಖಂಡಿತ ಮಾಡಬಾರದು. ಅದು ನಿಜವಾಗಲೂ ಅಪಾಯಕಾರಿ. ಹೀಗಾದರೆ ಉಳಿದೆಲ್ಲ ಧರ್ಮಗಳೂ ನಾಶವಾಗುತ್ತವೆ. ಇಡೀ ಜಗತ್ತು, ಒಂದೇ ಬಗೆಯ ಭೌತಿಕ ಅಥವಾ ಮಾನಸಿಕ ಭಾವನೆಯನ್ನು ತಳೆದರೆ, ಅದು ಖಂಡಿತವಾಗಿಯೂ ನಿರ್ನಾಮವಾಗುತ್ತದೆ. ಕ್ರೈಸ್ತ ದೇಶಗಳು ಇಡೀ ಜಗತ್ತನ್ನು ರಕ್ತಸಿಕ್ತವನ್ನಾಗಿ ಮಾಡಿಬಿಟ್ಟಿವೆ. ನೀವು ಕೊಲ್ಲುತ್ತೀರಿ, ಹತ್ಯೆಗೈಯುತ್ತೀರಿ; ನಮ್ಮ ದೇಶಕ್ಕೆ ಕುಡಿತವನ್ನು ಮತ್ತು ಕಾಯಿಲೆಗಳನ್ನು ಪರಿಚಯಿಸುತ್ತೀರಿ. ನಂತರ, ಗಾಯಕ್ಕೆ ಉಪ್ಪು ಸವರಿದಂತೆ, ಕ್ರಿಸ್ತನನ್ನು ಬೋಧಿಸುತ್ತೀರಿ ಮತ್ತು ಆ ಮೂಲಕ ಅವನನ್ನು ಶಿಲುಬೆಗೆ ಏರಿಸುತ್ತೀರಿ. ಈ ಘೋರ ಅನ್ಯಾಯದ ವಿರುದ್ಧ ಯಾವ ಕ್ರೈಸ್ತನು ತಾನೇ ದನಿಯನ್ನು ಎತ್ತಿರುವನು?''

ಇದಲ್ಲದೆ ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮಭಾವವನ್ನು ತಮ್ಮ ಉಪನ್ಯಾಸದಲ್ಲಿ ಸುಂದರವಾಗಿ ಪ್ರತಿಪಾದಿಸಿ

ದರು. ಮೇಲಾಗಿ ಧರ್ಮದ ವಿಷಯದಲ್ಲಿ ಹಿಂದೂ ಜನರ ಉದಾರತೆಯನ್ನು ಎತ್ತಿತೋರಿಸಿದರು. ಸ್ವಾಮೀಜಿಯವರ ಭಾಷಣವನ್ನು ಬಹು ಸಂಖ್ಯೆಯ ಸಭಿಕರು ಏಕಾಗ್ರಚಿತ್ತದಿಂದ ಆಲಿಸಿದರು.

ಸ್ವಾಮೀಜಿ ಕೂಡ ಈ ಭಾಷಣದ ಬಗ್ಗೆ ಬಹಳ ಉತ್ಸಾಹಭರಿತರಾಗಿ ಮೇರಿ ಹೇಲ್ ಅವರಿಗೆ ಹೀಗೆ ಪತ್ರ ಬರೆಯುತ್ತಾರೆ: ''ನಾನು ನೀಡಿದ ಭಾಷಣಗಳಲ್ಲೆಲ್ಲ ಇತ್ತೀಚಿನ ಭಾಷಣವು ಸರ್ವಶ್ರೇಷ್ಠವಾದುದು. ಆತಿಥೇಯರಾದ ಡಾ. ಪಾಮರ್ ಸಂತೋಷದ ಉನ್ಮಾದದಲ್ಲಿದ್ದರು, ಸಭಿಕರು ಸ್ತಂಭೀಭೂತರಾಗಿದ್ದರು. ಭಾಷಣ ಮುಗಿದ ಮೇಲಷ್ಟೇ ನನಗೆ ಗೊತ್ತಾಯಿತು, ನಾನು ಇಷ್ಟೊಂದು ದೀರ್ಘಕಾಲ ಮಾತನಾಡಿದೆನೆಂದು.'' ಒಂದು ಸಾವಿರದಷ್ಟು ಸಭಿಕರು ಈ ಭಾಷಣವನ್ನು ಕೇಳಿರಬಹುದು . ದೃಢಸಂಕಲ್ಪವುಳ್ಳ ಹಿಡಿಯಷ್ಟು ಜನರು ನಿಧಾನವಾಗಿ ದೇಶವೊಂದರ ಚಿಂತನಾ ಲಹರಿಯನ್ನು ಪರಿವರ್ತಿಸಬಲ್ಲರು. ಇದಲ್ಲದೆ, ಸ್ವಾಮೀಜಿಯವರ ವಾಣಿ ಪತ್ರಿಕಾಮಾಧ್ಯಮದ ಮೂಲಕ ಅಮೆರಿಕ ದೇಶದ ಉದ್ದಗಲಕ್ಕೂ ಹರಡಿತು. ಈ ಹಿಂದೆ ವಿರೋಧವನ್ನು ವ್ಯಕ್ತಪಡಿಸುತ್ತಿದ್ದ ಪತ್ರಿಕೆಗಳು ಕೂಡ ಸ್ವಾಮೀಜಿಯವರ ಭಾಷಣವನ್ನು ಮುಕ್ತಕಂಠದಿಂದ ಪ್ರಶಂಸಿಸುವ ಲೇಖನಗಳನ್ನು ಪ್ರಕಟಿಸಿದವು. ಬೋಸ್ಟನ್ ಈವನಿಂಗ್ ಟ್ರಾನ್ಸ್‌ಕ್ರಿಪ್ಟ್ ಎಂಬ ಪತ್ರಿಕೆಯು 'ಮಿಷನರಿಗಳಿಗೆ ಎಚ್ಚರಿಕೆ' ಎಂಬ ಲೇಖನವನ್ನು ಏಪ್ರಿಲ್ ೫, ೧೮೯೪ರಂದು ಪ್ರಕಟಿಸಿತು.

ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರದಲ್ಲಿ ನೀಡಿದ ಪ್ರವಚನವು ಅವರ ಸ್ನೇಹಿತರನ್ನು ಪ್ರಭಾವಗೊಳಿಸಿದ್ದು ಮಾತ್ರವಲ್ಲ, ಅವರ ನಿಂದಕರನ್ನು ಕೂಡ ಮೌನವಾಗಿರಿಸಿತು. ಇದಲ್ಲದೆ ಸ್ವಾಮೀಜಿಯವರ ಭಾಷಣವನ್ನು ಮೆಚ್ಚಿಕೊಂಡು, ಹಲವಾರು ಪತ್ರಿಕೆಗಳು ಸಂಪಾದಕೀಯಗಳನ್ನು ಕೂಡ ಬರೆದವು. ಅವುಗಳಲ್ಲಿ ಸಂಡೆ ನ್ಯೂಸ್ ಟ್ರಿಬ್ಯೂನ್ ಪತ್ರಿಕೆಯು ಮಾರ್ಚ್ ೧೮, ೧೮೯೪ ರಂದು ಪ್ರಕಟಿಸಿದ ಸಂಪಾದಕೀಯವೂ ಒಂದು. ಅದರ ಶೀರ್ಷಿಕೆ 'ಉದಾರತೆಯ ಪಾಠ' ಎಂಬುದಾಗಿತ್ತು. ಈ ಪತ್ರಿಕೆಯ ಲೇಖಕನು ಕಟ್ಟಾ ಕ್ರೈಸ್ತ ಪಂಥೀಯರಿಗೆ ಉದಾರತೆಯನ್ನು ಬೆಳೆಸಿಕೊಳ್ಳಲು ಕರೆಕೊಡುತ್ತಾನೆ. ಆದರೆ ಆತನಿಗೆ ಗೊತ್ತಿಲ್ಲ, ಸಂಪ್ರದಾಯಸ್ಥ ಕ್ರೈಸ್ತ ಮತದ ಸ್ವಭಾವವೇ ಹೀಗೆ: ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳುವುದೇ ಅವರಿಗೆ ಮುಖ್ಯ. ಉಳಿದುದೆಲ್ಲವೂ ಸೈತಾನನ ಕಾರ್ಯ. ಹೀಗಾಗಿ ಅವರು ಸ್ವಾಮೀಜಿಯವರ ವಿಚಾರಗಳ ಬಗ್ಗೆ ಉದಾರತೆಯ ಭಾವನೆಯನ್ನು ಬೆಳೆಸಿಕೊಳ್ಳುವುದು ಅಸಾಧ್ಯ.

ಸ್ವಾಮೀಜಿಯವರ ಭಾಷಣಕ್ಕೆ ವಿರೋಧಿಗಳ ಪ್ರತಿಕ್ರಿಯೆ ಬಾರದೇ ಇರಲಿಲ್ಲ. ಫ್ರೀ ಪ್ರೆಸ್ ಜರ್ನಲ್ ತನ್ನ ಮಾರ್ಚ್ ೧೭, ೧೮೯೪ರ ಸಂಚಿಕೆಯಲ್ಲಿ ಒಂದು ಅನಾಮಧೇಯ ಪತ್ರವನ್ನು ಪ್ರಕಟಿಸಿತು. ಅದರಲ್ಲಿ ಸ್ವಾಮೀಜಿಯವರ ಭಾಷಣದ ಕಟುಟೀಕೆಯನ್ನು ಮಾಡಲಾಗಿತ್ತು. ಈ ಪತ್ರಕ್ಕೆ ಯಾರೂ ಪ್ರತಿಕ್ರಿಯೆ ನೀಡಲಿಲ್ಲ. ಆದರೆ ಸ್ವಾಮೀಜಿಯವರ ಸಮರ್ಥಕನಾದ ಓ.ಪಿ. ಡೆಲ್‌ಡಕ್ ಎನ್ನುವವನು ಒಂದು ಲೇಖನವನ್ನು ಬರೆದನು. ಡೆಲ್‌ಡಕ್ ನೇರಮಾತಿನವನು. ತನ್ನ ಅಭಿಪ್ರಾಯಗಳನ್ನು ನಿರ್ಭಯವಾಗಿ ವ್ಯಕ್ತಪಡಿಸಲು ಹೆದರದವನು. ಸ್ವಾಮೀಜಿ ಹೇಗೆ ಡೆಟ್ರಾಯ್ಟ್ ನಗರದ ಉದಾರ ಮನಸ್ಸಿನವರನ್ನು ಉತ್ತೇಜಿಸಿದರು ಎಂದು ಇದರಿಂದ ಗೊತ್ತಾಗುತ್ತದೆ. ಈ ಲೇಖನದ ಕೆಲವು ಭಾಗಗಳು:

''ಕ್ರೈಸ್ತ ಧರ್ಮವು ಉಗಮವಾಗಿ ೧೯೦೦ ವರ್ಷಗಳು ಕಳೆದುಹೋದವು. ಅದನ್ನು ಅದರದೇ ಆದ ಪುರಾತನ ವೈಭವ ಮತ್ತು ಪರಿಶುದ್ಧತೆಗಳೊಡನೆ ಬೋಧಿಸಲಾಗುತ್ತಿತ್ತು. ಇದೊಂದು ಕ್ಷಮೆ, ವಿನಯ, ಸೇವೆ ಮತ್ತು ಪ್ರೇಮಗಳಿಂದ ಸಂಪದ್ಭರಿತವಾದ ಧರ್ಮ. ಇಷ್ಟಾದರೂ ಇದರ ಮೂಲಭೂತ ತತ್ತ್ವಗಳೆಂದರೆ ಸತ್ಯ ಮತ್ತು ನೈತಿಕತೆಗಳೇ ಆಗಿವೆ. ಈ ಮೌಲ್ಯಗಳೆಲ್ಲವೂ ಅತ್ಯಂತ ಪುರಾತನವಾದುವು, ಪ್ರಸಿದ್ಧವಾದುವು ಮತ್ತು ಏಸುಕ್ರಿಸ್ತನು ಹುಟ್ಟುವುದಕ್ಕೂ ಮುಂಚೆಯೇ ಅಭ್ಯಾಸದಲ್ಲಿ ಇದ್ದವು. ಈ ಧರ್ಮದಲ್ಲಿ ಅನೇಕ ಮಠಾಧಿಪತಿಗಳು, ಪ್ರವಾದಿಗಳು, ಸಂತರು ಮತ್ತು ಹುತಾತ್ಮರು ಆಗಿ ಹೋಗಿದ್ದಾರೆ. ಅವರೆಲ್ಲರೂ ದೇವರೊಡನೆ ನಡೆದಾಡಿದವರು. ಅನೇಕ ಸಂಖ್ಯೆಯ ನ್ಯಾಯಾಧಿಪತಿಗಳು, ಉನ್ನತ ದರ್ಜೆಯ ಪುರೋಹಿತರು, ಅನೇಕ ಜ್ಞಾನಿಗಳು, ಪವಿತ್ರಾತ್ಮರು ಬೆತ್ಲಹೆಮ್‌ನ ಈ ದಿವ್ಯ ನಕ್ಷತ್ರವು ಉದಯವಾಗುವುದಕ್ಕೆ ಮುಂಚೆ ಮಣ್ಣಿನಲ್ಲಿ ಒಂದಾಗಿ ಹೋಗಿದ್ದಾರೆ.

''ಹಾಗಾದರೆ (ಕ್ರೈಸ್ತ ಧರ್ಮವು ಹುಟ್ಟುವುದಕ್ಕೆ ಮುಂಚೆ) ಪ್ರೇಮ, ಭರವಸೆ, ಹರ್ಷೋಲ್ಲಾಸ, ಹಾಗೂ ಧರ್ಮ ಇರಲೇ ಇಲ್ಲವೇನು?

''ಕ್ರೈಸ್ತನಿಗೆ ಮೊದಲು ಹುಟ್ಟಿದ ಮಹಾತ್ಮರೆಲ್ಲರೂ ನತದೃಷ್ಟರೆ?

''ನಮ್ಮ ಮುಂದೆ ಇರುವ ಪ್ರಶ್ನೆ, ಕ್ರೈಸ್ತಧರ್ಮವು ಸತ್ಯವಾದುದೇ ಇಲ್ಲವೇ ಎಂಬುದಲ್ಲ. ನಾವು ಕ್ರೈಸ್ತಧರ್ಮಕ್ಕೆ ನಿಜವಾಗಿ ನಡೆದುಕೊಳ್ಳುತ್ತಿರುವೆವೋ, ಇಲ್ಲವೋ ಎಂಬುದು.

''ಒಬ್ಬ ಧಾರ್ಮಿಕ ಹಿಂದೂ ಸಂನ್ಯಾಸಿಯು ನಮ್ಮ ಬಳಿ ಬಂದು, ಪ್ರೇಮದ ಮಾತನ್ನು ಆಡುತ್ತಾನೆ. ತನ್ನ ದೇಶದ ದೀನ ಜನರಿಗಾಗಿ ಆಹಾರವನ್ನು ಯಾಚಿಸುತ್ತಾನೆ. ಆದರೆ ಅವರು ಅವನಿಗೆ ಕೊಟ್ಟದ್ದು ಕಲ್ಲು. ಈ ಸಂನ್ಯಾಸಿಯು ಇವರ ಕ್ರೈಸ್ತನನ್ನು ಸಂತೋಷವಾಗಿ ಒಪ್ಪಿಕೊಳ್ಳುತ್ತಾನೆ. ಅದರೊಂದಿಗೆ ತನ್ನ ಧರ್ಮವನ್ನು ಕೂಡ ಮೇಳವಿಸಿಕೊಳ್ಳುತ್ತಾನೆ. ಆತನ ಧರ್ಮವು ಈ ಮತಾಂಧ ಜನರ ಪಾಲಿಗೆ ಶಿಲಾಯುಗದ ಧರ್ಮವಾಗಿ ತೋರುತ್ತದೆ. ಹೀಗಾಗಿ ಆತನ ಮಾತನ್ನಾಗಲಿ, ತತ್ತ್ವಶಾಸ್ತ್ರವನ್ನಾಗಲಿ, ಆತನ ಧರ್ಮವನ್ನಾಗಲಿ ಒಪ್ಪಿಕೊಳ್ಳಲು ಅವರೆಲ್ಲ ತಯಾರಾಗಿಲ್ಲ. ಕೇವಲ ಕ್ರೈಸ್ತಧರ್ಮ ಮಾತ್ರವೇ ಎಲ್ಲ ಪ್ರಗತಿಯನ್ನು, ನಾಗರಿಕತೆಯನ್ನು ಉಂಟುಮಾಡಿದೆಯೆಂದು ಅವರು ಭಾವಿಸುತ್ತಾರೆ.

‘‘ಆದರೆ ಈ ಭಾವನೆ ಸರಿಯಲ್ಲ. ಎಲ್ಲ ದೇಶಗಳು, ಎಲ್ಲ ಕಾಲಮಾನಗಳು ತಮ್ಮದೇ ಆದ ಸಮಾಜಸುಧಾರಕರನ್ನು, ವಿಮೋಚನಕಾರರನ್ನು ಹುಟ್ಟಿಸಿವೆ. ಇಂಥ ಮಹಾಪುರುಷರು ಇನ್ನೂ ಹಲವಾರು ಜನರು ಹುಟ್ಟಿಬರುವರು. ಸತ್ಯವೆಂಬುದು ಸರ್ವಶಕ್ತವಾದುದು; ಅದು ಯಾವತ್ತೂ ಉಳಿಯುತ್ತದೆ. ಈ ಪ್ರಪಂಚವಾಗಲಿ, ಭಗವಂತನ ಅಗಣಿತ ಸೃಷ್ಟಿಯ ಬೇರಾವುದೇ ಸೃಷ್ಟಿಯಾಗಲಿ, ಪುರಾಣಗಳು ಹೇಳುವಂತೆ, ಒಂದು ಆಮೆಯ ಮೇಲೆಯೋ, ಇಲ್ಲವೇ ಹರ್ಕ್ಯುಲಿಸ್‌ನ ಮೇಲೆಯೋ ನಿಂತಿಲ್ಲ. ಇಡೀ ವಿಶ್ವದ ಆಧಾರಸ್ತಂಭಗಳೆಂದರೆ, ಜ್ಞಾನದ ಬೆಳಕು, ಸ್ವಾತಂತ್ರ್ಯ, ಪ್ರೇಮ ಮತ್ತು ನ್ಯಾಯಬದ್ಧತೆಗಳು. ಆದರೆ ಸಂಕುಚಿತ ದೃಷ್ಟಿಯುಳ್ಳ ಸಾಂಪ್ರದಾಯಿಕ ಕ್ರೈಸ್ತರು ಇವುಗಳಲ್ಲಿ ಒಂದೊಂದನ್ನೂ ನಾಶಪಡಿಸುತ್ತಿದ್ದಾರೆ.

‘‘ನಮ್ಮ ಆಶಯವಿದು. ಬೆತ್ಲಹೆಮ್‌ನ ಆ ದಿವ್ಯ ನಕ್ಷತ್ರವು (ಏಸುಕ್ರಿಸ್ತ) ನೈಜ ಕ್ರೈಸ್ತಧರ್ಮೀಯನೊಬ್ಬನ ದಿಕ್ಸೂಚಿ ನಕ್ಷತ್ರವಾಗಲಿ. ಆ ದಿವ್ಯ ಜ್ಯೋತಿಯು ಮತ್ತೊಮ್ಮೆ ಎದ್ದೇಳಲಿ, ತನ್ನ ಪುರಾತನ ವೈಭವದೊಂದಿಗೆ ಬೆಳಗಲಿ. ಇಂಥ ದಿವ್ಯಜ್ಯೋತಿಯ ದರ್ಶನವನ್ನೇ ಬೈಬಲ್ಲಿನ ಪ್ರಕಾರ, ಪೂರ್ವದಿಕ್ಕಿನಿಂದ ಬಂದ ಆ ಮೂರು ಜ್ಞಾನಿಗಳು ಪಡೆದುಕೊಂಡದ್ದು. ಇದರ ಪರಮಾದ್ಭುತವಾದ ಬೆಳಕು ಎಲ್ಲ ದೋಷಗಳ ಮಂಜಿನ ಆವರಣವನ್ನು ಕಳೆಯಲಿ ಹಾಗೂ ಮನುಷ್ಯರ ಮೆದುಳುಗಳಲ್ಲಿ ದಟ್ಟವಾಗಿ ಮೂಡಿರುವ ಕತ್ತಲೆಯನ್ನು ತೊಡೆಯಲಿ. ಈ ಪರಂಜ್ಯೋತಿಯು ಎಲ್ಲ ಕತ್ತಲಿನ ಮತ್ತು ಸಂಕುಚಿತ ಆಯಾಮಗಳನ್ನು, ಕ್ರೈಸ್ತೇತರ ದೇಶಗಳಲ್ಲಿ ಮಾತ್ರವಲ್ಲ, ಕ್ರೈಸ್ತ ನಾಡುಗಳಲ್ಲಿ ಕೂಡ, ನಾಶಪಡಿಸಲಿ. ಇದರಿಂದಾಗಿ, ಕ್ರೈಸ್ತಧರ್ಮವನ್ನು ವಿರೂಪಗೊಳಿಸುತ್ತಿರುವ ಭ್ರಮೆಯೆಂಬ ರಾಕ್ಷಸನು, ಎಂದೆಂದೂ, ಮತ್ತೆ ತಲೆಯೇಳದಂತೆ, ಅಡಗಿಹೋಗಲಿ.’’

ಈ ಸುಂದರವಾದ ಲೇಖನವನ್ನು ರಚಿಸಿದುದಕ್ಕಾಗಿ ಅದರ ಲೇಖಕನಾದ ಡೆಲ್‌ಡಾಕ್ ಮಹಾಶಯನನ್ನು ಖಂಡಿತವಾಗಿ ಅಭಿನಂದಿಸಬೇಕು. ಏಕೆಂದರೆ, ೧೮೯೦ರ ದಶಕದಲ್ಲಿ ಅಮೆರಿಕಾದಲ್ಲಿದ್ದ ಧಾರ್ಮಿಕ ಅಸಹಿಷ್ಣುತೆಯನ್ನು ಸ್ಪಷ್ಟವಾಗಿ ಆತನು ಈ ಬರಹದಲ್ಲಿ ಬಿಂಬಿಸಿದ್ದಾನೆ. ಇದನ್ನು ಅರ್ಥ ಮಾಡಿಕೊಂಡಾಗ, ಕ್ರೈಸ್ತ ಪಾದ್ರಿಗಳು, ದೂರ ಪಾಶ್ಚಾತ್ಯ ದೇಶಗಳ ಜನರನ್ನು ನಿಂದಿಸುವುದು ಕಡಿಮೆಯಾಗುತ್ತದೆ.

ತಮ್ಮ ಎರಡನೆಯ ಭೇಟಿಯ ಸಂದರ್ಭದಲ್ಲಿ , ಸ್ವಾಮೀಜಿ ಡೆಟ್ರಾಯ್ಟ್ ನಗರಕ್ಕೆ ಬಂದದ್ದು ನೇರವಾಗಿ ಚಿಕಾಗೋ ನಗರದಿಂದ. ಡೆಟ್ರಾಯ್ಟ್ ನಗರಕ್ಕೆ ಬಂದಿಳಿದ ಒಡನೆಯೇ, ಸ್ವಾಮೀಜಿ ಶ್ರೀಮತಿ ಮೇರಿ ಹೇಲ್ ಅವರಿಗೆ ಈ ಬಗ್ಗೆ ಪತ್ರವನ್ನು ಬರೆಯುತ್ತಾರೆ. ೧೮೯೪ರ ಮಾರ್ಚ್ ೧೦ ರಂದು ಬರೆದ ಈ ಪತ್ರದ ಭಾಗಗಳು ಹೀಗಿವೆ:

‘‘ನಾನು ನಿನ್ನೆ ಸಾಯಂಕಾಲ ಡೆಟ್ರಾಯ್ಟ್ ನಗರವನ್ನು ಸುರಕ್ಷಿತವಾಗಿ ಬಂದು ಸೇರಿದೆನು. ಶ್ರೀಮತಿ ಬ್ಯಾಗ್ಲಿ ಅವರ ಇಬ್ಬರು ಹೆಣ್ಣುಮಕ್ಕಳು ಗಾಡಿಯೊಂದಿಗೆ ನನಗಾಗಿ ಕಾಯುತ್ತಿದ್ದರು. ಹೀಗಾಗಿ ಎಲ್ಲವೂ ಚೆನ್ನಾಗಿಯೇ ನಡೆಯಿತು. ಇದೇ ರೀತಿಯಲ್ಲಿ ಭಾಷಣದ ಕಾರ್ಯಕ್ರಮವು ಕೂಡ ಚೆನ್ನಾಗಿಯೇ ನಡೆಯುತ್ತದೆ ಎಂದು ಆಶಿಸುತ್ತೇನೆ. ಏಕೆಂದರೆ ಈಗಾಗಲೇ ಟಿಕೆಟ್‌ಗಳು ಬಿಸಿ ದೋಸೆಯಂತೆ ಮಾರಾಟವಾಗುತ್ತಿವೆಯೆಂದು ಹುಡುಗಿಯರು ನನಗೆ ತಿಳಿಸಿದರು. ಇಲ್ಲಿಗೆ ಬಂದ ಮೇಲೆ ನಾನೊಂದು ಪತ್ರವನ್ನು ಕಂಡೆ, ಅದರಲ್ಲಿ ಮಿಸ್ಟರ್ ಪಾಮರ್ ಅವರು ತಮ್ಮ ಮನೆಗೆ ಅತಿಥಿಯಾಗಿ ಬರುವಂತೆ ನನ್ನನ್ನು ಆಹ್ವಾನಿಸಿದ್ದಾರೆ.

‘‘ಶ್ರೀಮತಿ ಬ್ಯಾಗ್ಲಿ ಮತ್ತು ಅವರ ಕುಟುಂಬದವರೆಲ್ಲರೂ ನನ್ನ ಪುನರಾಗಮನಕ್ಕೆ ಸಂತೋಷಪಡುತ್ತಿದ್ದಾರೆ. ನನ್ನನ್ನು ನೋಡಲು ಜನರು ಮತ್ತೆ ಬರುತ್ತಿದ್ದಾರೆ.’’ *(ಮುಂದುವರಿಯುವುದು)*

## ಶ್ರೀಮಾತೆಯವರ ಉಪದೇಶಗಳು



❋ ಧ್ಯಾನ, ಜಪ ಮಾಡಲು ನಿಯಮಿತವಾದ ಒಂದು ಸಮಯವನ್ನು ಇಟ್ಟುಕೊಳ್ಳುವುದು ಅತ್ಯಂತ ಆವಶ್ಯಕ. ಏಕೆಂದರೆ ಯಾವಾಗ ಆ ಕ್ಷಣ (ಸಾಕ್ಷಾತ್ಕಾರವುಂಟಾಗುವ ಕ್ಷಣ) ಬರುವುದೋ ಹೇಳಲಾಗದು. ಮುನ್ಸೂಚನೆಯೇ ಸಿಗಲಾರದು. ಆದ್ದರಿಂದ ಎಷ್ಟೇ ತೊಂದರೆಯಿರಲಿ, ನಿಯಮಿತವಾಗಿ ಧ್ಯಾನ ಜಪ ಮಾಡುವುದು ಅತ್ಯಂತ ಆವಶ್ಯಕವದುದು.

❋ **ಶಿಷ್ಯ :** ಕೆಲಸದ ಜಂಜಾಟ ಅಥವಾ ಅನಾರೋಗ್ಯ ಇತ್ಯಾದಿಗಳ ತೊಂದರೆಯಿರುತ್ತದೆ; ಆದ್ದರಿಂದ ಯಾವಾಗಲೂ ನಿಯಮಿತವಾಗಿ ಸಾಧನೆ ಮಾಡುವುದು ಸಾಧ್ಯವಾಗುತ್ತಿಲ್ಲ.

**ಶ್ರೀಮಾತೆ :** ಅನಾರೋಗ್ಯವಾದರೆ ಮನುಷ್ಯನ ಕೈಯಲ್ಲಿಲ್ಲ. ಕೆಲಸದ ಒತ್ತಡ ಅನಿವಾರ್ಯವಾಗಿದ್ದರೆ, ಕೇವಲ ಭಗವಂತನ ಸ್ಮರಣೆ ಮಾಡಿ, ಅವನಿಗೆ ಪ್ರಣಾಮ ಮಾಡಿದರೂ ಸಾಕು.

*(‘ಶ್ರೀಶಾರದಾದೇವಿ ವಚನವೇದ’, ಪು. ೪೫೩)*